# ಗಮಕ ಕಲಿಕೆ - ಭಾಗ ೨

ಶ್ರೀಮತೀ ಗಂಗಮ್ಮ ಕೇಶವಮೂರ್ತಿ

## ವಿರೂಪಾಕ್ಷ ಪಂಡಿತ ಕವಿಯ - ಚೆನ್ನಬಸವಪುರಾಣ

## (೭. ಗಿರಿಜಾತೆ ವಿರೂಪಾಕ್ಷನಂ ಕಂಡಳು)

ಶ್ರೀ ಗಿರಿಜೆಯಾಸ್ಯ ಕಮಳದ
ರಾಗ: ಧರ್ಮವತಿ

ಶ್ರೀಗಿರಿಜೆಯಾಸ್ಯ ಕಮಳದ ಸೊಂಪು ಪೊಳಯೆ ಪಿರಿ
ದಾಗಿ ಕುಚಚಕ್ರಯಮಳದ ಪೆಂಪು ಬಳೆಯೆ ತಲೆ
ವಾಗಿ ಕಣ್ನೈದಿಲ ಲರಿಕೆಯಿಂಪು ಕಳೆಯೇ ನಾಸಾನಿಲನ ಕಂಪು ಸುಳಿಯೆ
ಬೀಗೆ ಕುಂತಳತಮಂ ಸಾಗೆ ಚೆಂದುಟಿಗೆಂಪು
ಮೇಗೆ ಸೌಖ್ಯೋದಯದ ಬೆಳಗ ಪಸರಿಸಿ ನಿತ್ಯ
ನಾಗೆಸೆವ ಪಂಪಾವಿರೂಪಾಕ್ಷ ಸೂರ್ಯನಾನಂದಮಂ ನಮಗೀಯಲಿ

ವ್ಯಾಖ್ಯಾನದ ಧ್ವನಿ ಮುದ್ರಿಕೆ

ಇದು ಜಗಜ್ಜನನಿಯನ್ನು ವರ್ಣಿಸುತ್ತಾ ಹಂಪೆಯಲ್ಲಿ ನೆಲಸಿರುವ ಕವಿಯ ಆರಾಧ್ಯ ದೈವನಾದ ವಿರೂಪಾಕ್ಷನನ್ನು ಕವಿ ವಿರೂಪಾಕ್ಷ ಪಂಡಿತನು ಪ್ರಾರ್ಥಿಸುತ್ತಿರುವ ಪ್ರಾರ್ಥನಾ  ಪದ್ಯ ಇದಕ್ಕೆ ರಾಗ  ಧರ್ಮವತಿ   ಹೆಸರೇ ಸೂಚಿಸುತ್ತದೆ ಆಕೆ ಧರ್ಮದೇವತೆ  ಈ ರಾಗ ಎಷ್ಟು ನವಿರಾಗಿ ಹಾಡಿಸಬಲ್ಲದು ಕೇಳಿದಿರಾ ಪದಭಾವ, ಪೊಳೆಯೆ,ಬಳೆಯೆ ಸುಳಿಯೆ ಬೀಗೆ ಸಾಗೆ ಮೇಗೆ ಪಸರಿಸಿ ಎಸೆವ ಈ ಎಲ್ಲಾ ಪದಗಳನ್ನೂ ಒಂದು ಸ್ವರ ಮುಂದಿನದನ್ನು  ಹಾಡಿದೆ ಒಟ್ಟಾಗಿ ಗಮನಿಸಿ ಇಡೀ ರಾಗದ ಸಂಚಾರವಿದೆ   ಇವುಗಳನ್ನು ಗಮನಿಸಿ ಹಾಡುವ ಪ್ರಯತ್ನಸಾಗಲಿ

ಮುಖವೆಂಬ ಕಮಲದ ಸೌಂದರ್ಯವು ಪ್ರಕಾಶಿಸಲು ಚಕ್ರಾಕಾರದ ಎರಡು ಮೊಲೆಗಳ ಗಾತ್ರ ಹೆಚ್ಚಾಗಲು ಆಕೆಯು ತಲೆ ಬಾಗಿದ್ದರಿಂದ ನೈದಿಲೆಯಾಕಾರದ ವಿಶಾಲವಾದ ಕಣ್ಣುಗಳ ಮನೋಹರತೆಯುಕಡಿಮೆಯಾಗಲು ಪರಿಮಳದಿಂದ ಕೂಡಿದ ನಿಶ್ವಾಸದ ಗಾಳಿಯು ಸುಳಿದಾಡಲು ಕಪ್ಪಾದ ಕೂದಲು ಚೆದುರಿಹೋಗಲು ಚೆಂದುಟಿಯ ಕೆಂಪು ಮಸಕಾಗಲು ಕಾರಣವಾದರತಿ ಸುಖದ ಕಾಂತಿಯನ್ನು ಪಾರ್ವತಿಯ ಮುಖದಲ್ಲಿ ಹರಡಿ  ಶಾಶ್ವತವಾಗಿ ಬೆಳಗುವ ಪಂಪಾವಿರೂಪಾಕ್ಷ ನೆಂಬ ಸೂರ್ಯನುನಮಗೆ ಆನಂದವನ್ನು ಉಂಟುಮಾಡಲಿ

1 ಈಗ ಕಥಾ ಆರಂಭ
"ಗಿರಿಜಾತೆ  ವಿರೂಪಾಕ್ಷ ನಂ  ಕಂಡಳು"

ಆಲಿಸಿನ್ನೆಲೆ ಸಿದ್ಧರಾಮ
ರಾಗ.  ಪೂರ್ವಿ ಕಲ್ಯಾಣಿ

ಆಲಿಸಿನ್ನೆಲೆ ಸಿದ್ಧರಾಮ ಶಿವೆಯಂಕುರಿತು
ಪ್ರಾಲೇಯಶೈಲನರ್ಧಾಂಗಿ  ಪೂರ್ವದೆ ಬಹಳ
ಕಾಲಪರಿಯಂತರಂತಪದೊಳಿರಲುಮೆಯೊಲಿದು ಬಂದವಳು ಮುಂದೆ ನಿಂದು
ಬಾಲೆ ನಿನ್ನಯ ತಪಕೆ ಮೆಚ್ಚಿದೆಂ ವರವದೇಂ
ಕೇಳೆನಲ್ ನೀನೆನಗೆ ಸುತೆಯಪ್ಪುದೆನಲದರಿ
ನಾ ಲಲನೆ ದಕ್ಷಸಂಬಂಧಕಾಯವನುಳಿದು ಮೇನೆಯುದರದೆ ಬಳೆದಳು
ವ್ಯಾಖ್ಯಾನದ ಧ್ವನಿ ಮುದ್ರಿಕೆ

ಇಲ್ಲಿ ಹಾಡಿರುವ ಕ್ರಮ ಆಲಿಸಿನ್ನೆಲೆ ಸಿದ್ದರಾಮ  ಒಂದೇಸ್ಥಾಯಿ ಆ ಪದ ಓಡಾಡಿಸಬೇಕಿಲ್ಲ ಅದು ವ್ಯಕ್ತಿ ಕ್ರಿಯಾಪದವನ್ನಷ್ಟೇ ಏರು ಪೇರು ಮಾಡುವುದು   ಇದೇ ರಾಗದ ಕೃತಿ.

ಸಂಭಾಷಣೆ ಇಲ್ಲಿದೆ ಉಮೆಯವರ ಪ್ರಸಾದ ಮೇನೆಯ ಬೇಡಿಕೆ ಸ್ಥಾಯಿಯನ್ನು  ಗಮನಿಸಿ ವರ ಮೇಲಿನಸ್ವರ ಬೇಡಿಕೆಗೆ ಕೆಳಗಿನ ಸ್ವರ(ವಿನಯವನ್ನು ಸೂಚಿಸಲು)

ಉಳಿದು ಕೆಳಗೆ;ಬಳೆದಳು ಮೇಲಕ್ಕೆ ಒಂದೇ ಒಂದು ಸ್ವರದಲ್ಲಿ ವ್ಯತ್ಯಾಸ ತೋರಿಸಿದರೆ ಆಯ್ತು ಇದು  ರಾಗ  ಪೂರ್ವಿ ಕಲ್ಯಾಣಿ ಕಲ್ಯಾಣಿಯ ಅಪೂರ್ವ ವರ ಪ್ರಸಾದದಸಂಧರ್ಭ  ಪೂರ್ವದಲ್ಲಿ ಮೇನಾದೇವಿ ಮಾಡಿದ್ದ ಕಠಿಣ ತಪಸ್ಸಿನ  ಫಲ  ಸರ್ವ ಮಂಗಳೆಯು ಮೇನೆಯುದರದಲ್ಲಿ  ಗರ್ಭವಾಸವಾದುದು ಅಪೂರ್ವ ಇನ್ನು ಕೇಳಯ್ಯ ಸಿದ್ದರಾಮ   ಹಿಂದೆ ಹಿಮವಂತನ  ಪತ್ನಿಯಾದ  ಮೇನೆಯು ದಾಕ್ಷಾಯಣಿಯನ್ನು ಕುರಿತು ಬಹಳ ಕಾಲ  ತಪಸ್ಸು  ಮಾಡಿದಳು. ಆಗ ಉಮೆಯು ಅವಳ ತಪಕ್ಕೆ ಮೆಚ್ಚಿ ಅವಳ ಮುಂದೆ ಬಂದು  ನಿಂತು ಬಾಲೆ  ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ .ಏನು ವರ ಬೇಕು ಕೇಳುಎನ್ನಲು ಮೇನೆಯು ನೀನು ನನಗೆ ಮಗಳಾಗಿ  ಹುಟ್ಟಬೇಕು ಎಂದು ಕೇಳಲಾಗಿ,ಉಮೆ ದಕ್ಷನಿಗೆ ಸಂಬಂಧಿಸಿದ ಶರೀರವನ್ನು ತ್ಯಜಿಸಿ ಮೇನೆಯ ಗರ್ಭದಲ್ಲಿ ಬೆಳೆದಳು

ಈಗ  2ನೇ ಪದ್ಯ ಬಳಿಕ ತಿಥಿವಾರ ತಾರಾ ಯೋಗ
ರಾಗ: ಅಮೃತವರ್ಷಿಣಿ

ಬಳಿಕ  ತಿಥಿ  ವಾರ  ತಾರಾ  ಯೋಗ ಕರಣಸ
ಮ್ಮಿಳಿತ ಶುಭದಿವಸದೊಳ್ ಶುಭಲಗ್ನದೊಳ್ ಪಡೆ
ದಳೊಲವಿನಿಂ ಶಿವಲಿಂಘರೆಯಾದಕುವರಿಯಂ ಗಿರಿರಾಜನೆಯ್ದೆ ನೋಡಿ
ನಲಿದು ತಚ್ಚಿಶುವಿಂಗೆ ತಲ್ಲಿಂಗಮಂ ತನ್ನ
ಕುಲಗುರುವಿನಿಂ ದೀಕ್ಷೆಯಂ ಕೊಡಿಸಿ ಪೆಸರಿಡಲ್
ಬಳೆವುತಿರ್ದಳ್ ಲೋಕಮಾತೆ ಗಿರಿಜಾತೆ   ಶಿವಶರಣಕುಲಪಾರಿಜಾತೆ

ವ್ಯಾಖ್ಯಾನದ ಧ್ವನಿ ಮುದ್ರಿಕೆ

ಅರ್ಥ ಅನಂತರ ಮೇನೆಯು ತಿಥಿ ವಾರ ನಕ್ಷತ್ರ ಯೋಗ ಕರಣಗಳಿಂದ ಕೂಡಿದ ಒಂದು ಒಳ್ಳೆಯ ದಿವಸದಲ್ಲಿ ಶುಭಲಗ್ನದಲ್ಲಿ ಶಿವಲಿಂಗ ಸಮೇತಳಾದಮಗಳೊಬ್ಬಳನ್ನು ಪಡೆದಳು.ಆ ಮಗುವನ್ನು ಪರ್ವತರಾಜನು ಬಂದು ನೋಡಿ ಸಂತೋಷಗೊಂಡು ಆ ಮಗುವಿಗೆ ತನ್ನ ಕುಲಗುರುವಿನಿಂ ಆ ಲಿಂಗವನ್ನುದೀಕ್ಷೆಯಮೂಲಕ ಕೊಡಿಸಿ ಹೆಸರಿಡಲು ಶಿವಶರಣರ ಕುಲಕ್ಕೆ ಪಾರಿಜಾತೆಯಾದ ಲೋಕಮಾತೆಯಾದ ಪಾರ್ವತಿಯು ಬೆಳೆಯುತ್ತಿದ್ದಳು

ಸಿಹಿ ಎಲ್ಲರಿಗೂ ಇಷ್ಟವಾದ ರಸ ಷಡ್ರಸಗಳಲ್ಲಿ ಬಹಳ ನಾಲಗೆಗೆ ಇಷ್ಟವಾದರಂತೂ ಹೊಗಳುತ್ತೇವೆ  ಊಟಅಮೃತ ಅಮೃತ  ಅಂತ ಅದು ವರ್ಷ ಧಾರೆಯಾದರೆ  ಮತ್ತೆಷ್ಟು  ಸೊಗಸು  ಹಾಗೇಆಗಿದೆ  ಹಿಮವಂತ   ಮತ್ತು ಮೇನೆಯರಿಗೆ  ಇಂಥಹ ಸಂಧರ್ಭ ಕ್ಕಲ್ಲವೇ.ಅಮೃತವರ್ಷಿಣಿ

ಈಗ 3ನೇಪದ್ಯ ಶಿವನ ಪುಣ್ಯದ ಫಲಂ
ರಾಗ: ಜನರಂಜನಿ

ಬಳೆಬಳೆವಂತೆ ಶಿವನಮೋಹನಮಂತ್ರಶಕ್ತಿ
ಬಳೆಬಳೆವಂತೆ ಶಿವನಸುಖಮಿದಿರಿಟ್ಟು ಮೂರ್ತಿಯಂ ಧರಿಸಿ
ಬಳೆಬಳೆದಂತೆ ಕಂಗೊಳಿಸುವ  ಶಿವನ ಸತ್ಕೀರ್ತಿಲತೆ
ನಳನಳಿಸಿ ಬಳೆವಂತೆ ಶಿವನ ಜಯಲಕ್ಷ್ಮಿ
ಬಳೆಬಳೆವಂತೆ ಬಳೆದಳು ಶಿವನ ಪಟ್ಟದರಾಣಿ
ಕಲ್ಯಾಣಿ ಮೃದುಪಾಣಿ ಫಣಿವೇಣಿ ಮಧುರವಾಣಿ

[ವ್ಯಾಖ್ಯಾನದ ಧ್ವನಿ ಮುದ್ರಿಕೆ]

ಅರ್ಥ
ಶಿವನ ಪುಣ್ಯದ ಫಲವೇ ಅಧಿಕವಾಗಿ ಬೆಳೆಯುತ್ತಿರುವಂತೆ ಶಿವನ ಮೋಹನ ಮಂತ್ರಶಕ್ತಿ ಬೆಳೆಬೆಳೆಯುವಂತೆ ಪ್ರಕಾಶಿಸುವ ಶಿವನ ಸುಖವೇ ಎದುರಾಗಿ ರೂಪವನ್ನು ಧರಿಸಿ ಬೆಳೆಯುವಂತೆ,ಪ್ರಕಾಶಿಸುವ ಶಿವನ ಸತ್ಕೀರ್ತಿಯೆಂಬ ಬಳ್ಳಿ ಕೋಮಲವಾಗಿ ಬೆಳೆಯುವಂತೆ, ಶಿವನ ಜಯಲಕ್ಷ್ಮಿ ಬೆಳೆಯುವಂತೆ ಆ ಶಿವನ ಪಟ್ಟದರಾಣಿ ಕಲ್ಯಾಣಿ ಮೃದುಪಾಣಿ ಫಣಿವೇಣಿ ಮಧುರವಾಣಿ ಬೆಳೆದಳು

ಈಗ 4ನೇ ಪದ್ಯ
ಶಿವನ ವಿಭವದ ನಾಡು
[ರಾಗ: ಗೌರಿಮನೋಹರಿ]

ಶಿವನ ವಿಭವದ ನಾಡು ಶಿವನ ಮಹಿಮೆಯ ಬೀಡು
ಶಿವನ ಸುಖಮಯಮೂರ್ತಿ ಶಿವನ ನಿರುಪಮ ಕೀರ್ತಿ
ಶಿವನ ಭಾಗ್ಯದ ಪೆಂಪು ಶಿವನ ವಿಷಯದ ಸೊಂಪು ಶಿವನ ಶೋಭನದಲಂಪು
ಶಿವನ ಬಯಕೆಯ ಗೊತ್ತು ಶಿವನ ತನುವಿನ ಜೊತ್ತು
ಶಿವನ ಮನದನುಕೂಲೆ ಶಿವನ ಚಿತ್ತದ ಲೀಲೆ
ಶಿವನ ಸುಕೃತವ್ಯಕ್ತಿಯೆನಿಸುವ ಮಹಾಶಕ್ತಿ ವಿಭವದಿಂದಿರುತಿರ್ದಳು

[ವ್ಯಾಖ್ಯಾನದ ಧ್ವನಿ ಮುದ್ರಿಕೆ]

ಅರ್ಥ ಶಿವನ ವೈಭವ ದನಾಡು , ಶಿವನ ಮಹಿಮೆಯ ಬೀಡು,ಶಿವನ ಸುಖಮಯವಾದ ಮೂರ್ತಿ ಶಿವನ ಅನುಪಮವಾದ ಕೀರ್ತಿ, ಶಿವನ ಭಾಗ್ಯದ ಹೆಚ್ಚಳ,ಶಿವನ ವಿಷಯ ಸುಖದ ಸಮೃದ್ಧಿ ,ಶಿವನ ಮಂಗಳದ ಮೇಲ್ಮೆಶಿವನ ಬಯಕೆಯ ನೆಲೆ, ಶಿವನ ಶರೀರದ ಆಸರೆ, ಶಿವನ ಮನಸ್ಸಿನ ಅನುಕೂಲ, ಶಿವನ ಚಿತ್ತದ ಲೀಲೆ ಶಿವನ ಪುಣ್ಯದ ಮೂರ್ತಿ ಎನಿಸುವ ಮಹಾಶಕ್ತಿ ಗಿರಿಜೆಯು ವೈಭವದಿಂದ ಇರುತಿದ್ದಳು

ಈ ಪದ್ಯಕ್ಕೆ ಇದಕ್ಕಿಂತ ಬೇರೆ ರಾಗ ಯಾಕೆ ನೋಡಿ ಹೇಳಿ ಕೇಳಿ ಗೌರಿ ಲಕ್ಷಣವಾಗಿರುವವರನ್ನು ನಾವು ಏನಂತೀವಿ ಗೌರಿ;ತಿದ್ದಿದಗೌರಿ; ಅನ್ನೋಲ್ವೆ ಅಂತಹ ಗೌರೀದೇವಿ ಮನೋಹರಿಯಾಗಿರಲ್ವೇ ಅದಕ್ಕೇ ಅಂತ ಅಂದ್ಕೊಳ್ಳಿ ಈರಾಗದ ಪ್ರಯೋಗ.

ಈಗ 5ನೇಪದ್ಯ ಇಂತು ಪಾರ್ವತಿ ಲೀಲೆಯಿಂದಿರಲ್
[ರಾಗ: ಬೇಗಡೆ]

ಇಂತು ಪಾರ್ವತಿ ಲೀಲೆಯಿಂದಿರಲ್ ನೀರದಪ
ದಾಂತರದೆ ನಾರದಂ ಬಂದೊಡಗರಾಜನ
ತ್ಯಂತ ಹರುಷಧೊಳೆರಗಿ ಕೈಗೊಟ್ಟು ತನ್ನ ರಾಜಾಲಯಕ್ಕೊಯ್ಯು ತಿರಲು
ಮುಂದೆ ಗಿರಿಸುತೆಯಿರಲ್ ಮುನಿ ಕಂಡು ಪದ ಕೆರಗಿ
ಸಂತಸದಿ ಪೊಗಳುತಿರೆ ನೀಂವಂದ್ಯರೆಮ್ಮ ಮಂಗ
ಳಂ ತುತಿಸಿ ಮಣಿದಿರೇಕೆನೆ ನಗುತೆ ಗಿರಿರಾಜಗಾ ಮುನಿಪನಿಂತೆಂದನು

[ವ್ಯಾಖ್ಯಾನದ ಧ್ವನಿ ಮುದ್ರಿಕೆ]

ಕಲಹ ಪ್ರಿಯಯರೆಂದೇ ಪ್ರಖ್ಯಾತರಾದ ಬ್ರಹ್ಮನಮಾನಸ ಪುತ್ರರು ಆ ಜನ್ಮ ಬ್ರಹ್ಮಚಾರಿಗಳೂ ಭಗವಂತನ ಅನನ್ಯ ಭಕ್ತರು ಆದ ನಾರದ ಮಹರ್ಷಿಗಳು ತಮ್ಮ "ಮಹತಿ" ವೀಣೆಯಲ್ಲಿ "ಬೇಗಡೆ"ರಾಗದಲ್ಲಿ ಬೇಗ ಬೇಗ ಸುಮಧುರವಾಗಿ ನುಡಿಸುತ್ತಾ ಬಾಂದಳದಿಂದ ಭೂಮಿಗೆ ಬಂದರು. ವಿಶೇಷವಾದ ಅರ್ಥ ಕ ಕಮಲವನ್ನೇ ಆಸನವಾಗಿಸಿಕೊಂಡಿರುವ ಬ್ರಹ್ಮ+ಲ ಲಕ್ಷ್ಮಿಯ ಒಡೆಯ ವಿಷ್ಣು ಹ

ಹರನೆನಿಸುವಮಹೇಶ್ವರ ಈತ್ರಿಮೂರ್ತಿಗಳಿಗೆಲ್ಲಾ ಪ್ರಿಯನಾದವ ಕಲಹಪ್ರಿಯ ನಾರದ ಮಹಾನುಭಾವರ ಈ ರೀತಿಯಾಗಿ ಪಾರ್ವತಿಯು ಲೀಲೆಯಿಂದಿರುವಾಗ ಆಕಾಶಮಾರ್ಗದಲ್ಲಿ ನಾರದನು ಬರಲು ಪರ್ವತರಾಜನು ಬಹಳ ಸಂತೋಷದಿಂದ ನಮಸ್ಕರಿಸಿ ಕೈ ಹಿಡಿದು ತನ್ನ ಅಂತಃಪುರಕ್ಕೆ ಕರೆದುಕೊಂಡು ಹೋದನು ತಮ್ಮ ಮುಂದೆ ಇದ್ದ ಪಾರ್ವತಿಯನ್ನು ನೋಡಿ ನಾರದಮುನಿಯು ಅವಳಿಗೆ ನಮಸ್ಕರಿಸಿ ಸಂತೋಷದಿಂದ ಹೊಗಳುತ್ತಿರಲು ಪರ್ವತರಾಜನು ನಾರದನನ್ನು ಕುರಿತು ನೀವೇ ವಂದನೀಯರು ನಮ್ಮ ಮಗಳನ್ನು ಸ್ತುತಿಸಿ ನಮಸ್ಕರಿಸಿದಿರಲ್ಲ ಏಕೆ ಎನ್ನಲು ಪರ್ವತರಾಜನಿಗೆ ನಾರದನು ನಗುತ್ತ ಈ ರೀತಿ ಹೇಳಿದನು

ಈಗ 6ನೇಪದ್ಯ ಜನನಿಯೇ ದೇವಗಂಗೆಗೆ
ರಾಗ: ಕುಂತಲವರಾಳಿ

ಜನನಿಯೇ ದೇವಗಂಗೆಗೆ ವಿಯನ್ಮಂಡಲಂ

ಜನನಿಯೇ ಕಲ್ಪವೃಕ್ಷಕೆ ಚೈತ್ರರಥವನಂ

ಜನನಿಯೇ ದಿವ್ಯನಿಗಮಾಕ್ಷರಾಳಿಗೆ ಮುಖಂ ವಿಮಲ ಸುಜ್ಞಾನ ಸುಧೆಗೆ |

ಜನನಿಯೇ ವೈಕಾರ್ಯ ಮಾನಸಂ ರತ್ನಕ್ಕೆ

ಜನನಿಯೇ ಫಣಿಶಿರಂ ಸರ್ವಮಂಗಲೆಗೆ ನೀವ್

ಜನನಿ ಜನಕರೆ ಜಗನ್ಮಾತೆ ನಿಮ್ಮಯ ಮಗಳೆ ಶಿವಶಿವಾ! ಕೇಳೆಂದನು ||6||

ವ್ಯಾಖ್ಯಾನದ ಧ್ವನಿ ಮುದ್ರಿಕೆ

ಆಕಾಶವು ದೇವಗಂಗೆಗೆ ತಾಯಿಯೇ ಕುಬೇರನ ಚೈತ್ರರಥವನವು ಕಲ್ಪವೃಕ್ಷಕ್ಕೆ ತಾಯಿ ಎನ್ನಬಹುದೆ ಮಾತಿನ ಮೂಲಕ ಬರುವ ಶ್ರೇಷ್ಠವಾದ ವೇದಾಕ್ಷರಗಳಿಗೆ ಮುಖವು ತಾಯಿ ಆಗಬಲ್ಲುದೆ ಪವಿತ್ರವಾದ ಸುಜ್ಞಾನವೆಂಬ ಅಮೃತಕ್ಕೆ ವಿಕಾರವಾದ ಮನಸ್ಸು ತಾಯಿಯೇ ಹಾವಿನ ಹೆಡೆಯು ರತ್ನಕ್ಕೆ ತಾಯಿಯೇಪಾರ್ವತಿಗೆ ನೀವು ತಂದೆ ತಾಯಿಗಳೆ ಜಗನ್ಮಾತೆ ನಿಮ್ಮ ಮಗಳೆ ಶಿವಶಿವ ಕೇ ಳಿ ಎಂದನು

ಈಗ 7ನೇಪದ್ಯ ದಕ್ಷಸಂಬಂಧಕಾಯವನುಳಿದು
ರಾಗ: ಅಭೋಗಿ

ದಕ್ಷಸಂಬಂಧಕಾಯವನುಳಿದು ಮಿಗೆ ವಿರೂ

ಪಾಕ್ಷನರ್ಧಾಂಗಿ ಮೇನೆಯ ವರಕ್ಕಾಗಿ ತವ

ಕುಕ್ಷಿಯೊಳ್ ಬರೆ ನಿನ್ನ ಮಗಳೆಯೀಕೆಯ ವಿಯೋಗದೆ ಹೇಮಕೂಟಗಿರಿಯ |

ಸುಕ್ಷೇತ್ರ ತುಂಗಭದ್ರಾನದಿಯ ತೀರದ ಸ

ಮಕ್ಷದೊಳ್ ಘನತಪೋಧನನಾಗಿ ನಿಂದು ಭಾ

ಳಾಕ್ಷನಾನಂದದಿಂ ತನ್ನ ನಿಜಮಂ ತಾನೆ ಜಾನಿಸುತ್ತಿರುತಿರ್ಪನು ||7||

ವ್ಯಾಖ್ಯಾನದ ಧ್ವನಿ ಮುದ್ರಿಕೆ

ದಕ್ಷ ಸಂಬಂಧವಾದ ಶರೀರವನ್ನು ಬಿಟ್ಟು ಶ್ರೇಷ್ಠನಾದ ವಿರೂಪಾಕ್ಷನ ಅರ್ಧಾಂಗಿಯಾದ ಶಿವೆಯು ಮೇನೆಗೆ ಕೊಟ್ಟ ವರವನ್ನು ಸಲ್ಲಿಸಲು ನಿನ್ನ ಹೊಟ್ಟೆಯಲ್ಲಿ ಹುಟ್ಟಿದ್ದರಿಂದ ನಿನ್ನ ಮಗಳಾದುದು ದಿಟ, ಈಕೆಯ ವಿಯೋಗದಿಂದ ಮುಕ್ಕಣ್ಣ ನುಹೇಮಕೂಟ ಪರ್ವತದ ಪುಣ್ಯಕ್ಷೇತ್ರವಾದ ತುಂಗಭಧ್ರಾನದಿಯ ತೀರದಲ್ಲಿಘನವಾದ ತಪಸ್ಸನ್ನು ಕೈಕೊಂಡು ಆನಂದದಿಂದ ತನ್ನನ್ನು ತಾನೇ ಧ್ಯಾನಿಸುತ್ತಿದ್ದಾನೆ

ಈಗ 8ಪದ್ಯ ಆ ವಿರೂಪಾಕ್ಷನಿರ್ದೆಡೆಗೆ
ರಾಗ: ಸೌಖ್ಯದಾಯಿನಿ/ಸುಮನೇಶರಂಜಿನಿ/ಹರಿಕಂಸ್

ಆ ವಿರೂಪಾಕ್ಷನಿರ್ದೆಡೆಗೆ ಕಳುಪ್ಪೆ ಮಹಾ

ದೇವಿಯಂ ನೀನೆನಲ್ ಕೈಕೊಳುತ್ತುಚಿತ ಸಂ

ಭಾವನೆಯೊಳಾ ಮುನಿಪನಂ ಕಳುಪಿ ಪರಶಕ್ತಿಯೆಂದರಿದು ಭಕ್ತಿಯಿಂದೆ|

ಪಾವನ ಚರಿತ್ರೆ ನಡೆ ಪೋಪೆವೆನೆ ತಾಯ್ಗೆರಗಿ

ತೀವಿದನುರಾಗದಿಂ ಪುಷ್ಪಕವನೇರಿ ಕಾಂ

ತಾವಳಿಯ ಗಡಣದಿಂ ಪಿತನೊಡನೆ ಹೇಮಕೂಟಾಚಲಕೆ ಬರುತಿರ್ದಳು||8||

ವ್ಯಾಖ್ಯಾನದ ಧ್ವನಿ ಮುದ್ರಿಕೆ

ಆ ಶಿವನಿರುವ ಜಾಗಕ್ಕೆ ನೀನು ಮಹಾದೇವಿಯನ್ನು ಕಳುಹಿಸಯ್ಯ ಎಂದನುಅವನ ಮಾತನ್ನು ಒಪ್ಪಿಕೊಂಡರು ಉಚಿತ ರೀತಿಯಲ್ಲಿ ಉತ್ತರಿಸಿ ನಾರದನನ್ನು ಕಳಿಸಿಕೊಟ್ಟು ಪರ್ವತರಾಜನು ಮಗಳನ್ನು ಪರಾಶಕ್ತಿಯೆಂದು ತಿಳಿದು ಭಕ್ತಿಯಿಂದ ಪಾವನಚರಿತ್ರಳೇ ಹೋಗೋಣ ನಡೆ ಎನ್ನಲು ಆಕೆತಾಯಿಗೆ ನಮಸ್ಕರಿಸಿ ಅನುರಾಗದಿಂದ ಕೂಡಿ ಪುಷ್ಪಕ ವಿಮಾನವನ್ನು ಹತ್ತಿ ಸಖೀ ಸಮೂಹದೊಡನೆ ತಂದೆಯೊಡಗೂಡಿ ಹೇಮಕೂಟ ಪರ್ವತಕ್ಕೆ ಬರುತ್ತಿದ್ದಳು

ಈ ರಾಗದ ವಿಶೇಷತೆ ರಾಗದಮಹಿಮೆ  ಸೌಖ್ಯದಾಯಿನಿ ಮತ್ತು ಸಮನೇಶರಂಜನಿ ಎಂದು ಸುಮನಸರು ಎಂದರೆ  ದೇವತೆಗಳು ಅವರಿಗೆ ಈಶ ಒಡೆಯ ಇಂದ್ರ  ಅವರಿಗೆಲ್ಲರಿಗೂ ರಂಜಿಸುವುದಕ್ಕಾಗಿ  ಸುಖವನ್ನು ಕೊಡುವುದಕ್ಕಾಗಿ  ಹೊರಟಿದ್ದು ಜೊತೆಗೆ ತನ್ನ  ಗುರಿಯನ್ನು ಸಾಕಾರಗೊಳಿಸಲುಎಂಬ ಅರ್ಥಗಳಿಂದ ಕೂಡಿದೆ ಈ ರಾಗ. ಈ ರಾಗವನ್ನು ಹರಿಕಂಸ್ ಎಂದೂ ಹೇಳುವ.

ಈಗ 9ಪದ್ಯ ನಿರುತಮನಿಮಿಷಕುಲಕ್ಕಾಶ್ರಯಂ
ರಾಗ: ಸಾರಮತಿ

ನಿರುತಮನಿಮಿಷಕುಲಕ್ಕಾಶ್ರಯಂ ತಾನಾಗಿ

ವರ ಸಕಲ ಭುವನಕಾಸ್ಪದಮಾಗಿ ಹಂಸಸಂ

ಚರಣಾನುಬಂಧಿಯಾಗಿಯುಮೆಸೆವ ಕಮಲಸಂಭವ ನಿಜನಿವಾಸಮಾಗಿ |

ದುರಿತದೂರಮುಮಾಗಿ ಮುನಿಜನಾನ್ವಿತಮಾಗಿ

ನಿರುತಂ ಶಿವೋದ್ಭಾಸಕರಮಾಗಿ ಸುಮನಸರ

ಗಿರಿಯಂತೆ ಕಂಗೊಳಿಸುತಿಹ ತುಂಗಭದ್ರೆಯಂ ಗಿರಿರಾಜಸುತೆ ಕಂಡಳು ||9||

ವ್ಯಾಖ್ಯಾನದ ಧ್ವನಿ ಮುದ್ರಿಕೆ

ವಿಶೇಷತೆ ಸಾರಮತಿಯಪ್ರಯೋಗ ಗಿರಿಜೆಯೂ ಸಾರಮತಿ ಜೊತೆಗೆ ತುಂಗೆಯೂ ಸಾರವತ್ತಾದ ನದಿ   ಕಾರಣ ಕವಿಯೇ ವಿವರಿಸಿರುವನು ಅದರಸಾರವತ್ತತೆಯ

ಅರ್ಥ  ಸದಾ ದೇವತೆಗಳಿಗೆ(ಮೀನು"ಗಳಿಗೆ) ಆಶ್ರಯ ಸ್ಥಾನವಾಗಿ ಶ್ರೇಷ್ಠವಾದ ಎಲ್ಲ ಪ್ರಪಂಚಕ್ಕೂಆಧಾರವಾಗಿ   ಚಲಿಸುವ ಸೂರ್ಯನಲ್ಲಿ(ಹಂಸಗಳಲ್ಲಿ) ಸಂಬಂಧವುಳ್ಳದ್ದಾಗಿ,ಕೀರ್ತಿವೆತ್ತ ಬ್ರಹ್ಮನ(ಕಮಲಗಳ) ವಾಸಸ್ಥಳವಾಗಿ, ಪಾಪಗಳಿಂದ ದೂರವಾಗಿ, ಮುನಿಜನಗಳಿಂದ ಕೂಡಿದ,ಯಾವಾಗಲೂ  ಮಂಗಳಕರವಾಗಿ(ಶಿವನಿಂದ)  ಶೋಭಿಸುತ್ತ ಮೇರುಪರ್ವತದಂತೆ  ಕಂಗೊಳಿಸುತ್ತಿರುವ ತುಂಗಭದ್ರೆಯನ್ನು  ಗಿರಿಜೆಯು ನೋಡಿದಳು

ಈಗ 10 ಪದ್ಯ ಇಂಚರದೊಳೊಪ್ಪುವರಸಂಚೆಗಳ
ರಾಗ: ರಂಜನಿ

ಇಂಚರದೊಳೊಪ್ಪುವರಸಂಚೆಗಳ ಕೊಂಚೆಗಳ

ಮುಂಚೆ ಪರಿವುರುತರಂಗಾವಳಿಯ ಗಾವಳಿಯ

ಸಂಚರಿಪ ಸಕಲಮುನಿರಾಜಿಗಳ ವಾಜಿಗಳ ತಡಿವಿಡಿದ ವೃಕ್ಷಂಗಳ|

ಚಂಚರೀಕದ ಸರದ ಸೊಂಪುಗಳ ಪೆಂಪುಗಳ

ಮಿಂಚುತಿಹ ನೈದಿಲ್ಗಳೋಳಿಗಳ ಪಾಳಿಗಳ

ಕಾಂಚನಾಂಭೋಜಾತ ಧೂಳಿಗಳ ಕೇಳಿಗಳ ತುಂಗಭದ್ರೆಯ ಕಂಡಳು || 10||

ವ್ಯಾಖ್ಯಾನದ ಧ್ವನಿ ಮುದ್ರಿಕೆ

ಹಾಡುವುದು ಕವಿಯ ಜೀವಂತ ಕಲೆ ಕೇಳಿಸಿಕೊಳ್ಳುವುದು ಸಹೃದಯರ ಔದಾರ್ಯ ಹಸುವಿನಂತೆ ಕವಿ ಹಿಂಡುವುದು ಹಾಲನ್ನು ಅದರಿಂದ ಬೆಣ್ಣೆ ಕಡೆಯುವುದು ,ತುಪ್ಪಕಾಯಿಸುವುದು ವಿಮರ್ಶಕ ಕೆಲಸ

ಮಧುರಧ್ವನಿ ಮಾಡುತ್ತಿರುವ ರಾಜಹಂಸಗಳು ಮತ್ತು ಕ್ರೌಂಚಪಕ್ಷಿಗಳು ಸಪ್ಪಳ ಮಾಡುತ್ತ ಮುಂದೆ ಚಲಿಸುವ ತೆರೆಗಳ ಸಮೂಹ ಓಡಾಡುತ್ತಿರುವ ಮುನಿಸಮೂಹ ಮರಗಳನ್ನು ಆಶ್ರಯಿಸಿರುವ ಪಕ್ಷಿಗಳು ಗುಂಪಾಗಿ ಮನೋಹರತೆಯಿಂದ ಕೂಡಿದ ದುಂಬಿಗಳ ಝೇಂಕಾರ ಮಿಂಚುತ್ತಿರುವ ನೈದಿಲೆಗಳ ಸಾಲಾದ ಬದುಗಳು ಮತ್ತು ಚಿನ್ನದ ಬಣ್ಣದ ಕಮಲ ಪುಷ್ಪಗಳ ಧೂಳಿ ಇವುಗಳಿಂದ ಕೂಡಿದ ತುಂಗಭದ್ರೆಯನ್ನು ಪಾರ್ವತಿಯು ಕಂಡಳು ವಿಶೇಷತೆ ರಂಜನೀಯವಾಗಿರುವ ಈ ಪ್ರಕೃತಿಯ ಸೌಂದರ್ಯಕ್ಕೆ ರಾಗರಂಜನಿ ರಂಜಿಸುತ್ತಿರುವುದರಲ್ಲಿ ರಂಜನಿಯಪಾತ್ರರಮಣೀಯವಾಗಿದೆಅಲ್ಲವೇ

ಪ್ರತಿಸಾಲಿನಲ್ಲಿಬರುವ ಪದಸಮುಚ್ಚಯವನ್ನು ಬೇರ್ಪಡಿಸುವಹಾಗಿಲ್ಲ ಜೋಡಿಜೋಡಿಯಾಗೇಹಾಡಬೇಕೂ
ಈ ಪದ್ಯ ಹಾಡಿರುವ ರೀತಿಗಮನಿಸಿರಿ

ಈಗ 11 ಪದ್ಯ ತುಂಗಭದ್ರೆಯನಾಗ ಗಿರಿಸುತೆಗೆ
ರಾಗ: ಚಾರುಕೇಶಿ

ತುಂಗಭದ್ರೆಯನಾಗ ಗಿರಿಸುತೆಗೆ  ತೋರಿಸುತೆ

ತುಂಗ ಸಂತೋಷದಿಂದಂ ತಳರೆ ರಂಜಿಸುವ

ನಂಗಹರನಿರ್ಪ ಪಂಪಾಕ್ಷೇತ್ರಮೆಡೆವಿಡದೆ ರಂಜಿಪ ವನಂಗಳಿಂದೆ |

ಕಂಗೆಸೆದುದ್ಯೈದೆ ಸಾಸಿರಮೊಗದ ಫಣಿವಲ್ಲ

ಭಂಗೆ ಕೊಂಡಾಡಲಸದಳವೆನಿಸುವದರ ನವ

ಮಂಗಲತೆಯಂ ಕಂಡು ಪುಷ್ಪಕವನಾ ಸರ್ವಮಂಗಲೆಯ ಪಿತನಿಳಿದನು || 11||

ವ್ಯಾಖ್ಯಾನದ ಧ್ವನಿ ಮುದ್ರಿಕೆ

ವಿಶೇಷತೆ ಜಟಾಜೂಟನಿಗೆ ಅರ್ಪಣೆ ಚಾರುಕೇಶಿ ಚಾರು ಮನೋಹರವಾಗಿರುವ ಕೇಶರಾಶಿ ಇರುವವರಿಗೆ ಪರ್ವತ ರಾಜನು ತನ್ನ ಮಗಳಾದಪಾರ್ವತಿಗೆ ತುಂಗಭದ್ರೆಯನ್ನು ತೋರಿಸುತ್ತ ಅತಿಯಾದ ಸಂತೋಷದಿಂದ ಮುಂದೆ ಬರಲು ಪ್ರಕಾಶಿಸುವ ಚಂದ್ರಶೇಖರನಿರುವ ಪಂಪಾಕ್ಷೇತ್ರವು ಎಡಬಿಡದೆ ರಂಜಿಸುವ ವನಗಳಿಂದ ಕಣ್ಣಿಗೆ ಕಾಣಿಸಿತು,ಸಾವಿರ ಮುಖವನ್ನು ಹೊಂದಿರುವ ಫಣಿರಾಜನಿಗೂ ಅದನ್ನು ಕೊಂಡಾಡಲು ಅಸಾಧ್ಯ ಎನ್ನಿಸುವ ಅದರ ಹೊಚ್ಚ ಹೊಸ ಮಂಗಳಾಕೃತಿಯನ್ನು ನೋಡಿ ಸರ್ವಮಂಗಳೆಯ ತಂದೆಯಾದ ಹಿಮವಂತನು ಪುಷ್ಪಕವಿಮಾನದಿಂದ ಇಳಿದನು

ಈಗ 12ಪದ್ಯ ಬಾಗಿಲೊಳ್ ಕಾದಿರ್ದ
ರಾಗ: ನಾಯಕಿ

ಬಾಗಿಲೊಳ್ ಕಾದಿರ್ದ ನಂದೀಶನಂ ಕಂಡು

ಬಾಗಿ ಮಸ್ತಕವನಗರಾಜನನುರಾಗದಿಂ

ಭೋಗಿಭೂಷಣನಿರ್ಪನಿಲ್ಲಿ ನಿನ್ನಂ ಪಿಂತೆ ಭೋಗಿಸಿದ ನಿಜರಮಣನು|

ಯೋಗಿರೂಪಿಂದೆ ನಿನ್ನಾತನೆಂತಿಹನಂತು

ಯೋಗಿಣಿಯುಮೆನಿಸಿ ನೀನೊಲಿಸೆಂದು ಬಿನ್ನೈಸಿ

ಸಾಗಿದಂ ಬೀಳ್ಕೊಂಡು ಪರಶಿವನ ಮನವನಿಂಪಾಗಿ ಪಡೆಯೆಂದು ಪುರಕೆ || 12||

ವ್ಯಾಖ್ಯಾನದ ಧ್ವನಿ ಮುದ್ರಿಕೆ

ವಿಶೇಷತೆ ರಾಗವೇ ವಿಶೇಷ ನಾಯಕಿ ನಾಯಕಿಯಾಗಿ ತನ್ನ ನಾಯಕನನ್ನು ಪಡೆಯುವುದಕ್ಕಾಗಿ ಆಗಮನ ನಮ್ಮ ಈ ಕಥಾ ನಾಯಕಿ ಬಾಗಿಲಲ್ಲಿ ಕಾದಿದ್ದನಂದೀಶನನ್ನು ನೋಡಿ ಅವನಿಗೆ ತಲೆಬಾಗಿ ನಮಸ್ಕರಿಸಿ,ಆಗ ರಾಜನು ಪ್ರೀತಿಯಿಂದ ಪಾರ್ವತಿಯನ್ನು ಕುರಿತು ನಿನ್ನ ಪೂರ್ವ ಜನ್ಮದ ಪತಿಯಾದ ನಾಗಭೂಷಣನು ಯೋಗಿಯ ರೂಪದಲ್ಲಿ ಇಲ್ಲಿದ್ದಾ
ನೆನಿನ್ನವನಾದ ಆತನು ಯಾವ ರೂಪದಲ್ಲಿದ್ದಾನೆಯೋ ಅದೇ ರೀತಿ ನೀನೂ ಯೋಗಿಣಿಯಾಗಿ ಅವನನ್ನು ಒಲಿಸಿಕೊ, ಪರಮೇಶ್ವರನ ಮನಸ್ಸನ್ನು ಆನಂದದಿಂದ ಪಡೆದುಕೊ ಎಂದು ಹೇಳಿ ಅವಳಿಂದ ಬೀಳ್ಕೊಂಡು ತನ್ನ ಪಟ್ಟಣಕ್ಕೆ ಹೊರಟನು

ವಿಶೇಷ ಈ ಪದ್ಯದಲ್ಲಿ ಭೋಗಿ ಭೂಷಣನ ಅಂದರೆ ಹಾವನ್ನೇ ಆಭರಣ ಮಾಡಿಕೊಂಡಿರುವವನಿಗೆ ನಾವು ಹಾಕುತ್ತಿರುವ ರಾಗದ ಹಾರವಿದು.

ಈಗ 13ಪದ್ಯ ಜಯೆ ವಿಜಯೆಗಳುಮೆನಿಪ
ರಾಗ: ದ್ವಿಜಾವಂತಿ

ಜಯೆ ವಿಜಯೆಗಳುಮೆನಿಪ ಘನಸಹಾಯಗಳನನು

ನಯದಿಂದೆ ಬೆಸಸಿ ನಿಜಪುರದತ್ತ ಕುಧರಸಂ

ಜಯನಾಥನ್ಯೆದಲುಮೆಯಿತ್ತ ಪಂಪಾ ಮಹಾಕ್ಷೇತ್ರಕ್ಕೆ ನಡೆದು ಬರಲು |

ನಿಯತದಿಂ ಹೋಮಧೂಮಂಗಳಿಂ ಶ್ರುತಿ ಸಮಾ

ಶ್ರಯ ಮಂತ್ರಘೋಷದಿಂ ವರಹವಿರ್ಗಂಧದಿಂ

ನಯನ ಕರ್ಣ ಘ್ರಾಣತತಿಗಳಂ ತಣಿಸುತೆ ತಪೋವನಂ ಕಣ್ಗೆಸೆದುದು ||13||

ವ್ಯಾಖ್ಯಾನದ ಧ್ವನಿ ಮುದ್ರಿಕೆ

ಇದಕ್ಕೆ ರಾಗ ದ್ವಿಜಾವಂತಿ ಯಾಕೆಂದರೆ ಅಲ್ಲಿಯಪರಿಸರಕ್ಕೆ ಹೊಂದಿಕೆಯಾಗಿದೆ ಎಂದು

ಅರ್ಥ ಅತ್ತಕಡೆ ಜಯೆ ವಿಜಯೆಎಂಬ ಸೇವಕಿಯರನ್ನು ಅನುನಯದಿಂದ ಅವಳ ಸೇವೆಗೆ ನೇಮಿಸಿ ತನ್ನ ರಾಜಧಾನಿಗೆ ಪರ್ವತ ರಾಜನು ಹೋದನು, ಇತ್ತ ಕಡೆ ಪಾರ್ವತಿಯು ಪಂಪಾಕ್ಷೇತ್ರಕ್ಕೆ ನಡೆದು ಬಂದಳು,ಅಲ್ಲಿ ನಿಯಮದಂತೆ ಕ್ರಮವಾಗಿ ಹೋಮಗಳಿಂದ ಹೊರಟ ಹೊಗೆಯಿಂದ,ವೇದಮಂತ್ರಗಳ ಘೋಷಣೆಯಿಂದ,ಶ್ರೇಷ್ಠವಾದ ಹವಿಸ್ಸುಗಳ ಸುವಾಸನೆಯಿಂದ,ಕಿವಿ ಕಣ್ಣು ಮೂಗುಗಳನ್ನು ತಣಿಸುತ್ತಿದ್ದ ತಪೋವನವು ಕಣ್ಣಿಗೆ ಕಾಣಿಸಿತು

ಈಗ 14ಪದ್ಯ ರುದ್ರಾಕ್ಷೆಗಳ ಕೋವ ವಿಮಲ
ರಾಗ: ಕಾಮವರ್ಧಿನಿ

ರುದ್ರಾಕ್ಷೆಗಳ ಕೋವ ವಿಮಲ ಶಿವಲಿಂಗಕ್ಕೆ

ರುದ್ರಾಭಿಷೇಕಮಂ ಮಾಳ್ಪ ಭಯಭಕ್ತಿಯಂ

ರುದ್ರಪೂಜೋಪಕರಣಂಗಳಂ ಬೆಳಪ ವಲ್ಕಲಮನುರೆ ತೊಳೆದೊಣಗಿಪ |

ರುದ್ರನರ್ಚನೆಗೆ ನಾನಾ ಕುಸುಮಮಂ ಕೊಯ್ವ

ರುದ್ರರೆಂದೇ ಕಂಡು ಯತಿಗಳ್ಗೆ ನಮಿಪ ಶತ

ರುದ್ರೀಯ ಮೊದಲಾದ ಮಂತ್ರಗಳಂ ಜಪಿಪ ಮುನಿಗಳಿಂ ವನಮೆಸೆದುದು || 14||

ವ್ಯಾಖ್ಯಾನದ ಧ್ವನಿ ಮುದ್ರಿಕೆ

ಅರ್ಥ ರುದ್ರಾಕ್ಷಿಗಳು ಪೋಣಿಸುವ ಪರಮ ಪವಿತ್ರವಾದ ಶಿವಲಿಂಗಕ್ಕೆ ರುಧ್ರಾಭಿಷೇಕವನ್ನು ಮಾಡುವ ಭಯಭಕ್ತಿಯಿಂದ ರುದ್ರಪೂಜೆಗೆ ಉಪಕರಣಗಳನ್ನು ತೊಳೆಯುವ ನಾರುಡೆಯನ್ನು ತೆಗೆದು ಒಣಗಿಸುವ ಶಿವನ ಅರ್ಚನೆಗೆ ನಾನಾ ರೀತಿಯ ಹೂಗಳನ್ನು ಕೊಯ್ದುಕೊಂಡು ಬರುವ ಯತಿಗಳನ್ನು ಶಿವನೆಂದೇ ತಿಳಿದು ನಮಸ್ಕರಿಸುವ ಶತರುದ್ರೀಯ ಮೊದಲಾದ ಮಂತ್ರಗಳನ್ನು ಜಪಿಸುವ ಋಷಿಗಳಿಂದ ಆ ವನವು ಶೋಭಿಸುತ್ತಿದ್ದಿತು

ರಾಗ ಕಾಮವರ್ಧಿನಿ ರಾಗದಲ್ಲೀ ಅರ್ಥವಿದೆತಾನೆ ಕಾಮನನ್ನುದಹಿಸಿದವ ಆತ ಆದರೆಕಾಮವನ್ನು ವರ್ಧಿಸುವವನೂ ಆತನೇ ಇದು ಹೇಗೆಅಂದರೆ ಹಾಗೇ ಅವನನ್ನು ಒಲಿಸಿಕೊಳ್ಳುವ ಬಗೆ ಇದು.

ಈಗ 15ಪದ್ಯ ವೇದಶಾಸ್ತ್ರಾಗಮಗಳಂ

ರಾಗ: ಕನ್ನಡ

ವೇದಶಾಸ್ತ್ರಾಗಮಗಳಂ ಶಿಷ್ಯಸಮುದಯ

ಕ್ಕೋದಿಸುವ ಪೌರಾಣಮಂ ಪೇಳ್ವ ಭಾಷೆ ಮೊದ

ಲಾದ ತರ್ಕಂಗಳಂ ಕನ್ನಡಿಪ ಸ್ನಾನಮಂ ಮಾಳ್ಪ ಜಪಗಳನೆಣಿಸುವ |

ಸಾದರದೆ ಯಜ್ಞಂಗಳಂ ಮಾಳ್ಪ ಹೋ

ಮ ಮೊದಲಾದ ಸತ್ಕ್ರಿಯೆಗಳಂ ನಡೆಸುತಿರ್ಪರ್ ಶಿವಪಾದಯುಗಳ ಸ್ಮರರ್

ಮುಕ್ತಿಯುವತೀವರರ್ ಮುನಿವರರ್ ಕಣ್ಗೆಸೆದರು ||15||

ವ್ಯಾಖ್ಯಾನದ ಧ್ವನಿ ಮುದ್ರಿಕೆ

ಯಜ್ಞ ಅನಾದಿಯಾದ ವೈದಿಕ ಸಂಸ್ಥೆ ಹೋತೃ ಯಜ್ಞಕ್ಕೆ ಬರುವ ದೇವತೆಗಳನ್ನು ಆಹ್ವಾನಿಸುವ ಕೆಲಸ ಈ ಸ್ತೋತ್ರಗಳೇ "ಋಕ್" ಉದ್ಗಾತೃ ಅವನ್ನು ಗಾನ ರೂಪದಿಂದ ಹಾಡುವನು ಅದೇ "ಸಾಮ" ಯರ್ು ಅಧ್ವರ್ಯು ಇಳಿದು ಬಂದ ದೇವತೆಗಳನ್ನು ಅರ್ಚಿಸಿ ಆರಾಧಿಸುವವ,ಬ್ರಹ್ಮ ಸಮರ್ಪಕವಾಗಿ,ವೇದೋಕ್ತವಾಗಿ ನಡೆಯುತ್ತಿರುವುದನ್ನು ನಿರೀಕ್ಷಿಸುವವ ಅಥರ್ವಣಬ್ರಹ್ಮ ಬಳಸಿರುವ ರಾಗ ಕನ್ನಡ ಅಪರೂಪವಾಗಿ ಬಳಸುವರಾಗವಿದು ತರ್ಕಂಗಳ ಕನ್ನಡಿಪ ಎಂದಿದೆ ನಾನು ಹಾಗಾಗಿ ಭಾಷೆ ಅದೂ ಕನ್ನಡ ಭಾಷೆ ಯಾಕಾಗಬಾರದು ಎಂದುಪ್ರಯೋಗಿಸಿರುವೆನು ಅರ್ಥ ವೇದ ಶಾಸ್ತ್ರ ಆಗಮಗಳನ್ನು ಶಿಷ್ಯರಿಗೆ ಪಾಠ ಮಾಡಿಸುವ ,ಪುರಾಣಗಳನ್ನು ಹೇಳುವ,ಭಾಷೆ ಮೊದಲಾದ ತರ್ಕಗಳನ್ನು ತಿಳಿಯ ಹೇಳುವ,ಸ್ನಾನವನ್ನು ಮಾಡುವ ,ಜಪಮಣಿಗಳನ್ನು ಎಣಿಸುವ,ಆದರದಿಂದ ಯಜ್ಞಗಳನ್ನು ಮಾಡುವ,ಹೋಮ ಮೊದಲಾದ ಸತ್ಕರ್ಮಗಳನ್ನು ನಡೆಸುತ್ತಿರುವ, ಶಿವನ ಪಾದಗಳನ್ನೇ ಯಾವಾಗಲೂ ಸ್ಮರಿಸುವ ಮುಕ್ತಿಸ್ತ್ರೀಯ ಪತಿಗಳಾದ ಋಷಿಶ್ರೇಷ್ಠರು ಕಣ್ಣಿಗೆ ಕಾಣಿಸಿದರು

ಈಗ 16ಪದ್ಯ ಇಂತು ರಂಜಿಸುವ
ರಾಗ: ವಾಸಂತಿ

ಇಂತು ರಂಜಿಸುವ ಪುಣ್ಯಾಶ್ರಮಂಗಾಣುತೋ

ರಂತೆ ಗಿರಿಸುತೆ ಬಂದು ಹೇಮಕೂಟಾಚಲ

ಪ್ರಾಂತದೆ ತಪೋಮೂರ್ತಿಯಾಗಿ ಶೋಭಿಪ ವಿರೂಪಾಕ್ಷನಂ ಕಂಡುನಮಿಸಿ

ಸಂತಸದೊಳೊಲ್ದು ಕೊಂಡಾಡಿ ಭಯಭಕ್ತಿಯಿಂ'

ಸಂತತಂ ಪೂಜಿಸುತ್ತಿರ್ದಳಗಜಾತೆಯ

ತ್ಯಂತ ಭುವನಖ್ಯಾತೆ ಸಕಲನಿಗಮಾತೀತೆ ಸಂಪೂತೆ ಲೋಕಮಾತೆ || 16||

ವ್ಯಾಖ್ಯಾನದ ಧ್ವನಿ ಮುದ್ರಿಕೆ

ಈ ರೀತಿ ಶೋಭಿಸುವ ಪುಣ್ಯಾಶ್ರಮವನ್ನು ನೋಡುತ್ತ ಪಾರ್ವತಿಯು ನೇರವಾಗಿ ಬಂದು ಹೇಮಕೂಟಗಿರಿಯ ಪ್ರಾಂತದಲ್ಲಿ ತಪಸ್ಸಿನಲ್ಲಿ ಕುಳಿತು ಶೋಭಿಸುತ್ತಿದ್ದ ಶಿವನನ್ನು ನೋಡಿ ನಮಸ್ಕರಿಸಿ ಸಂತಸದಿಂದ ಮೆಚ್ಚಿ ಪ್ರೀತಿಸಿ ಕೊಂಡಾಡಿ ಭಯಭಕ್ತಿಯಿಂದ ಅನವರತವೂ ಪ್ರಪಂಚದಲ್ಲಿ ಮಹಾಖ್ಯಾತಿಯನ್ನು ಹೊಂದಿದವಳೂ ಎಲ್ಲ ವೇದಗಳಿಗೂ ಮೀರಿದವಳೂ ಪರಮ ಪವಿತ್ರಳೂ

ಲೋಕಮಾತೆಯೂ  ಆದ ಗಿರಿಜೆ ಪೂಜೆ  ಮಾಡುತ್ತಿದ್ದಳು ಬಳಸಿರುವ ರಾಗ ವಾಸಂತಿ. ವಾಸಂತಿ ಎಂದರೆ ಬಳ್ಳಿ ಮತ್ತು ಹೂವು ಹೇಳಿ ಕೇಳಿ ಆಕೆ ರೂಪಸಿ  ಹೂವಿನಂತೆ  ಜೊತೆಗೆಬಳ್ಳಿಯಂತೆ  ನಮ್ಮಗೌರಮ್ಮನವರು ಇದಕ್ಕೆ ನೀವೇನಂತೀರಿ.

ಇತರೆ ಪದ್ಯಗಳು:

1. ಜೈಮಿನಿ ಭಾರತದ ಪದ್ಯಗಳು
2. ರಾಮಾಯಣ ದರ್ಶನಂ
3. ದೇವೀ ಮಹಾತ್ಮೆ
4. ವಿವಿಧ ರೀತಿಯ ಪದ್ಯಗಳು
5. ಗೋಕರ್ಣ ಮಹಾತ್ಮೆ
6. ಕುಮಾರವ್ಯಾಸ ಭಾರತ
7. ಮರುತ್ತರಾಯನ ಚರಿತೆ
8. ರನ್ನನ ಗದಾಯುದ್ಧ
9. ಭೀಷ್ಮ ಭಕ್ತಿ
10. ಗಜೇಂದ್ರ ಮೋಕ್ಷ
11. ಹರಿಭಕ್ತಿ ಸಾರ
12. ಚೂಡಾರತ್ನ ಶತಕ
13. ಸರ್ವಜ್ಞನ ವಚನ
14. ಪದ್ಯಗಳ ಕಣಜ